**ಸಾಕ್ಷಿಯನ್ನು ದಿನಾಂಕಃ 17.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ ಎ ಜಿ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

| **ಕ್ರಮ ಸಂಖ್ಯೆ :** | | **ದಾಖಲೆಗಳು** |
|---|---|---|
| 1 | : | ದಿಃ 23.01.2023 ರ ಕ್ರಯ ಕರಾರು ಪತ್ರ |
| 2 | : | ಆರ್ ಟಿ ಸಿ –2 |
| 3 | : | ಪ್ರತಿವಾದಿಯರಿಗೆ ನೀಡಿದ ನೋಟೀಸ್ ನ ಕಛೇರಿ ಪ್ರತಿ |
| 4 | : | ಅಂಚೆ ರಶೀದಿಗಳು –2 |
| 5 | : | ಜಾರಿಯಾಗದೇ ಹಿಂದಿರುಗಿ ಬಂದ ಅಂಚೆ ಲಕೋಟೆಗಳು –2 |

**ಮೇಲ್ಕಂಡ ದಾಖಲೆಗಳನ್ನು ನಿಶಾನೆ ಪಿಃ1 ರಿಂದ 8 ಎಂದು ಗುರುತಿಸಲಾಯಿತು.**

ನಿಪಿಃ7 ಮತ್ತು 8 ರ ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಹೊಡೆದು ನೋಡಲಾಗಿ ಅದರಲ್ಲಿದ್ದ ನೋಟೀಸ್ ಕಛೇರಿ ಪ್ರತಿಗೆ ತಾಳೆಯಾಗಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿಃ7(ಎ) ಮತ್ತು 8(ಎ) ಎಂದು ಗುರುತಿಸಲಾಯಿತು.

ನಿಪಿ 1 ರ ಕ್ರಯದ ಕರಾರು ಪತ್ರವನ್ನು ಪ್ರತಿವಾದಿಯರು ನನಗೆ ಬರೆದುಕೊಟ್ಟಿದ್ದು, ನನಗೆ ಈಗ ನಿಪಿಃ1 ರ ದಾಖಲೆ ತೋರಿಸುತ್ತಿದ್ದು ಅದರಲ್ಲಿ ಅವರ ಸಹಿ ಇದೆ. ಸದರಿ ಸಹಿಯನ್ನು ನಿಪಿಃ1(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ನಿಪಿಃ 1 ಕ್ಕೆ ಸಾಕ್ಷಿದಾರರಾಗಿ ಕೆ ಸಿದ್ದರಾಜು ಮತ್ತು ರುದ್ರಯ್ಯ ಎನ್ನುವವರು ಸಹಿ ಹಾಕಿದ್ದು ಈಗ ನಾನು ನಿಪಿಃ1 ರ ಮೇಲೆ ಇರುವ ಅವರ ಸಹಿಗಳನ್ನು ಗುರುತಿಸುತ್ತಿದ್ದೇನೆ. ಸದರಿ ಸಹಿಗಳನ್ನು ನಿಪಿಃ1(ಸಿ) ಮತ್ತು 1(ಡಿ) ಎಂದು ಗುರುತಿಸಲಾಯಿತು. ನಿಪಿಃ1 ಅನ್ನು ಬಾಲಕೃಷ್ಣ ಎನ್ನುವ ಪತ್ರ ಬರಹಗಾರರು ಬಿಕಲಂ ಆಗಿ ಸಹಿ ಹಾಕಿದ್ದು, ನಾನು ಈಗ ನಿಪಿಃ1 ರ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸುತ್ತಿದ್ದೇನೆ. ಸದರಿ ಸಹಿಯನ್ನು ನಿಪಿಃ1(ಇ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

ಮದ್ದೂರು.